# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ.115/2023

ಪ್ರ.ವ.ಬೋ. ದಿನಾಂಕ - 10.06.2026

| | | | |
|---|---|---|---|
| ಸಾಕ್ಷಿದಾರರ ಹೆಸರು | - ನಿಜಲಿಂಗಪ್ಪ | ಪ್ರಾ.ಸಾ. | - 05 |
| ತಂದೆಯ ಹೆಸರು | - ನೀಲನಾಯ್ಕ | ಚಾ.ಸಾ. | - 05 |
| ವಯಸ್ಸು | - 41 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ಗೌನಹಳ್ಳಿ | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ಚಾಸಾ:1 ಗೊತ್ತು. ಅವರ ಮಗಳು ಕವಿತಾ ಗೊತ್ತು. ಕವಿತಾಳನ್ನು ಮದುವೆಯನ್ನು 1 ನೇ ಆರೋಪಿಯ ಮಗನಿಗೆ ಮದುವೆ ಮಾಡಿಕೊಡಲಾಗಿತ್ತು. 2023 ರಲ್ಲಿ ಸದರಿ ಕವಿತಾ ಕೂನಿಕೆರೆಯ ಹತ್ತಿರ ಇರುವ ಚಾನೆಲ್‌ನಲ್ಲಿ ತೀರಿಕೊಂಡಿರುತ್ತಾಳೆ ಎಂದು ಗೊತ್ತಾಯಿತು. ಮದುವೆಯಾದ ನಂತರ ಕವಿತಾಳಿಗೆ ಆಕೆಯ ಗಂಡ, ಗಂಡನ ತಂದೆ-ತಾಯಿ ಮಕ್ಕಳಾಗಲಿಲ್ಲ ಎಂದು ಕಿರುಕುಳ ನೀಡುತ್ತಿದ್ದು, ಅವಳಿಗೆ ಫೋನ್ ಕೊಡುತ್ತಿರಲಿಲ್ಲ ಎಂದು ಕವಿತಾ ಇವರ ತಂದೆ-ತಾಯಿ ನಮಗೆ ತಿಳಿಸಿರುತ್ತಾಳೆ. ಕವಿತಾ ಇವಳಿಗೆ ಮಕ್ಕಳಾಗದೇ ಇದ್ದುದರಿಂದ ಆರೋಪಿಗಳು ಕವಿತಾ ಇವಳಿಗೆ ಬಂಜೆ ಎಂದು ಬೈಯುತ್ತಿದ್ದರು ಎಂದು ಕವಿತಾ ಇವರ ತಂದೆ-ತಾಯಿ ತಿಳಿಸಿರುತ್ತಾರೆ. ದಿ. 16.4.2023 ರಂದು ಕವಿತಾ ಇವಳ ಮೃತದೇಹ ಚಾನೆಲ್‌ನಲ್ಲಿ ಬಿದ್ದಿರುವುದು ಗೊತ್ತಾಯಿತು. ಕವಿತಾ ಇವಳ ಗಂಡ ಚಾನೆಲ್‌ನಲ್ಲಿ ಬಿದ್ದು ತೀರಿಕೊಂಡಿರುತ್ತಾಳೆ. ಕವಿತಾ ಮತ್ತು ಅವಳ ಗಂಡ ಕೂನಿಕೆರೆಯ ದೇವಸ್ಥಾನಕ್ಕೆ ಹೋಗಿದ್ದರೆಂದು ಗೊತ್ತಾಯಿತು. ನಂತರ ಮನೆಗೆ ಹೋಗಿ ಜಗಳ ಮಾಡಿದ್ದ ಬಗ್ಗೆ

ಗೊತ್ತಾಗಿರುತ್ತದೆ. ನಂತರ ನಾವು ಚಾನೆಲ್ ಹತ್ತಿರ ಹೋಗಿದ್ದು, ಎಲ್ಲ ವಿಚಾರವನ್ನು ತಿಳಿದುಕೊಂಡಿರುತ್ತೇವೆ. ನಂತರ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿ ನನ್ನ ವಿಚಾರಣೆ ಮಾಡಿರುತ್ತಾರೆ. ಅಲ್ಲಿ ವಿಷಯವನ್ನು ಹೇಳಿರುತ್ತೇನೆ.

(ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಸಾಕ್ಷಿಯ ಸಾಕ್ಷ್ಯವನ್ನು ಪರಿಗಣಿಸಿ ಅನುಮತಿ ನೀಡಲಾಯಿತು.)

**– ಪಾಟೀ ಸವಾಲು – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

ತಹಶೀಲ್ದಾರರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**– ಪಾಟೀ ಸವಾಲು – ಆರೋಪಿ ಪರ ಶ್ರೀ ಪಿ.ಎಂ.ಎಚ್. ವಕೀಲರಿಂದ –**

ಹಿರಿಯೂರು ಪೋಲಿಸ್ ಠಾಣೆಗೆ ಮಧ್ಯಾಹ್ನ 3–4 ಗಂಟೆಗೆ ರಂಗಸ್ವಾಮಿ, ನಾಗರಾಜ, ನಾನು, ನನ್ನ ಮಾವ ರಂಗಪ್ಪ, ನನ್ನ ತಮ್ಮ, ನಮ್ಮೂರಿನವರು ಹೋಗಿದ್ದೆವು. ಪೋಲಿಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಪೋಲಿಸರು ನನ್ನ ಸಹಿಯನ್ನು ಪಡೆದಿರುವುದಿಲ್ಲ. ಚಾಸಾ:1 ರವರು ನಮ್ಮ ಸಂಬಂಧಿಕರು ಎಂದರೆ ಸರಿ. ಚಾಸಾ:1 ಮತ್ತು ನಾವು ಹೊಲದಲ್ಲಿ ಇರುತ್ತೇವೆ. ನಮ್ಮ ಮತ್ತು ಚಾಸಾ:1 ರವರ ಜಮೀನು ಅರ್ಧ ಕಿ.ಮೀ. ದೂರದಲ್ಲಿರುತ್ತವೆ. ಕವಿತಾ ಇವಳ ಮದುವೆಯಾದ ನಂತರ ಆರೋಪಿತರ ಮನೆಗೆ ನಾನು ಯಾವತ್ತೂ ಹೋಗಿಲ್ಲ. ಕವಿತಾಳು ಆರೋಪಿತರ ಮನೆಯಲ್ಲಿ ಯಾವ ರೀತಿ ಇದ್ದಳು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಕವಿತಾ ಸಾಯುವುದಕ್ಕಿಂತ ಮೂರು ದಿನ ಮೊದಲು ಗೌನಹಳ್ಳಿಯ ಮೈಲಾರಲಿಂಗೇಶ್ವರ ಜಾತ್ರೆ ಇತ್ತು ಎಂದರೆ ಸರಿ. ಸದರಿ ಜಾತ್ರೆಗೆ ಕವಿತಾ ಮತ್ತು ಅವಳ ಗಂಡ ವೆಂಕಟೇಶ ಬಂದಿದ್ದರು ಎಂದರೆ ಸರಿ. ಎರಡು ದಿನಗಳ ನಂತರ ಕವಿತಾಳನ್ನು ಬಿಟ್ಟು ವೆಂಕಟೇಶ ಒಬ್ಬನೇ ಹೋಗಿದ್ದ ಎಂದರೆ ಸರಿಯಲ್ಲ. ಇಬ್ಬರೂ ಜೊತೆಯಲ್ಲಿಯೇ

ಹೋಗಿರುತ್ತಾರೆ. ಸದರಿ ವಿಷಯವನ್ನು ಚಾಸಾ:1 ನನಗೆ ತಿಳಿಸಿರುತ್ತಾರೆ. ಕವಿತಾ ತೀರಿಕೊಂಡ ನಂತರ ಕವಿತಾ ಮತ್ತು ಅವಳ ಗಂಡ ಇಬ್ಬರೂ ಹೋದ ಬಗ್ಗೆ ನನಗೆ ಚಾಸಾ:1 ತಿಳಿಸಿರುತ್ತಾರೆ. ಜಾತ್ರೆಗೆ ಬಂದಾಗ ಕವಿತಾ ಮತ್ತು ಆಕೆಯ ಗಂಡನನ್ನು ಮಾತನಾಡಿಸಿರುತ್ತೇನೆ. ಅವರಿಬ್ಬರೂ ಚೆನ್ನಾಗಿ ಇದ್ದರು. ಅವರು ನಮ್ಮ ಮನೆಯ ಹತ್ತಿರ ಬಂದಿದ್ದರು, ಅವರು ಅನ್ಯೋನ್ಯವಾಗಿದ್ದರು. ಶುಕ್ರವಾರ ಜಾತ್ರೆ ಇದ್ದು, ಶನಿವಾರ ಬೆಳಿಗ್ಗೆ ರಥೋತ್ಸವ ಇತ್ತು ಎಂದರೆ ಸರಿ. ಕವಿತಾ ಮತ್ತು ಅವಳ ಗಂಡ ಕೂನಿಕೆರೆಯ ಆಂಜನೇಯಸ್ವಾಮಿ ರಥೋತ್ಸವಕ್ಕೆ ಬೆಳಿಗ್ಗೆ 4 ಗಂಟೆಗೆ ಹೋಗಿದ್ದ ಬಗ್ಗೆ ಗೊತ್ತಾಗಿರುತ್ತದೆ. ಕವಿತಾ ಮತ್ತು ಅವಳ ಗಂಡ ಕೂನಿಕೆರೆಯ ಆಂಜನೇಯಸ್ವಾಮಿ ರಥೋತ್ಸವಕ್ಕೆ ಹೋಗಿದ್ದು, ನಮ್ಮ ಮನೆಗೆ ಬಂದಿಲ್ಲ ಎಂದು 1 ನೇ ಆರೋಪಿ ಚಾಸಾ:1 ರವರಿಗೆ ಫೋನ್ ಮಾಡಿ ನಿಮ್ಮ ಊರಿಗೆ ಬಂದಿದ್ದಾರೆಯೇ ಎಂದು ವಿಚಾರಣೆ ಮಾಡಿದ್ದರು ಎಂದರೆ ಸರಿ. ಆಗ ಚಾಸಾ:1 ರವರು ಕವಿತಾ ಮತ್ತು ಅವರ ಗಂಡ ನಮ್ಮೂರಿಗೆ ಬಂದಿಲ್ಲ ಎಂದು ಹೇಳಿದರು ಎಂದರೆ ಸರಿ. ಮಧ್ಯಾಹ್ನ 3 ಗಂಟೆಗೆ 1 ನೇ ಆರೋಪಿ ಚಾಸಾ:1 ರವರಿಗೆ ಫೋನ್ ಮಾಡಿ ವೆಂಕಟೇಶನ ಶವ ಚಾನೆಲ್‌ನಲ್ಲಿ ಸಿಕ್ಕಿರುವ ಬಗ್ಗೆ ತಿಳಿಸಿರುತ್ತಾನೆ ಎಂದರೆ ಸರಿ. ನಂತರ ಚಾಸಾ:1 ರವರು ಹೋಗಿದ್ದರು ಎಂದರೆ ಸರಿ. ಕವಿತಾ ಮತ್ತು ಆಕೆಯ ಗಂಡ ಜಾತ್ರೆ ಮಾಡಿ ಮನೆಗೆ ಹೋಗಿ ಜಗಳ ಮಾಡಿದ್ದನ್ನು ನಾನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ಕವಿತಾ ಸಾಯುವ ಮುಂಚೆ ಚಾಸಾ:1 ದೊಡ್ಡಘಟ್ಟಕ್ಕೆ ಹೋಗಿಲ್ಲ ಎಂದರೆ ಸರಿ.

ಕವಿತಾ ಜೀವಂತವಿದ್ದಾಗ ಆರೋಪಿತರು ತನಗೆ ಮಕ್ಕಳಾಗಿಲ್ಲ ಎಂದು ಕಿರುಕುಳ ಕೊಡುತ್ತಿದ್ದ ಬಗ್ಗೆ ಮತ್ತು ಮೊಬೈಲ್ ಕೊಡುತ್ತಿಲ್ಲ ಎಂದು ದೂರು ಕೊಟ್ಟಿಲ್ಲ ಎಂದರೆ ಸರಿ. ಕವಿತಾ ಇವಳ ಮದುವೆಯಾದ ನಂತರ ಆರೋಪಿತರ ಮನೆಗೆ ನಾನು ಯಾವತ್ತೂ ಹೋಗಿಲ್ಲ ಎಂದರೆ ಸರಿ. ಕವಿತಾ ಸತ್ತ ನಂತರ ಚಾಸಾ:1 ಎಲ್ಲ

ವಿಷಯ ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ನಿಪಿ:3 ರಲ್ಲಿ ನಾನು ಕಾಣಿಸುತ್ತಿಲ್ಲ ಎಂದರೆ ಸರಿ. ನಿಪಿ:3 ರಲ್ಲಿ ಒಬ್ಬ ಹೆಣ್ಣು ಮಗಳು ಇದ್ದು, ಆಕೆ ನನಗೆ ಕಣ್ಣು ಸರಿಯಾಗಿ ಕಾಣುತ್ತಿಲ್ಲವಾದ್ದರಿಂದ ಕಾಣುತ್ತಿಲ್ಲ. ಫೋಟೊ ತೆಗೆಯುವ ಸಮಯದಲ್ಲಿ ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಶವದ ಹತ್ತಿರ ಪೋಲಿಸರು ಮತ್ತು ತಹಶೀಲ್ದಾರರು ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ. ಶವದ ಹತ್ತಿರ ಆಸ್ಪತ್ರೆಯಲ್ಲಿ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಹೇಳಿಲ್ಲ ಎಂದರೆ ಸರಿ. ಬೈಕಿನಲ್ಲಿ ಹಣ್ಣು, ಕಾಯಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಕವಿತಾ ಮತ್ತು ಅವರ ಗಂಡ ರಥೋತ್ಸವಕ್ಕೆ ಹೋಗಿದ್ದ ಬಗ್ಗೆ ಚಾಸಾ:1 ನನಗೆ ತಿಳಿಸಿದ್ದರು. ನಾನು ಮತ್ತು ಚಾಸಾ:1, 14 ತೋಟದ ಮನೆಯಲ್ಲಿ ವಾಸ ಮಾಡುತ್ತೇವೆ ಎಂದರೆ ಸರಿ. ನಮ್ಮ ಜಮೀನಿಗೂ ಮತ್ತು ಆರೋಪಿಗಳ ಊರಿಗೆ ಸುಮಾರು 14 ಕಿ.ಮೀ. ದೂರ ಇರುತ್ತದೆ. ಕವಿತಾ ಸಾಯುವ ಮುಂಚೆ ನಾನು, ಚಾಸಾ:1, 14 ಗೌನಹಳ್ಳಿಯಲ್ಲಿದ್ದೆವು ಎಂದರೆ ಸರಿ. ಕವಿತಾ ಮತ್ತು ಅವಳ ಗಂಡ ಚಾನೆಲ್‌ನಲ್ಲಿ ಬೀಳುವುದಕ್ಕೆ ಯಾವ ಕಾರಣವಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

3 ನೇ ಆರೋಪಿ ಯಾವ ಕೆಲಸ ಮಾಡುತ್ತಿದ್ದಾನೆ ಎಂದು ನನಗೆ ಗೊತ್ತಿಲ್ಲ. ವೆಂಕಟೇಶ ಸಾಯುವುದಕ್ಕಿಂತ ಮೊದಲು ಕೊಬ್ಬರಿ ಮತ್ತು ಚಾಪೆ ವ್ಯಾಪಾರ ಮಾಡುತ್ತಿದ್ದ ಎಂದರೆ ಸರಿ. ಆರೋಪಿಗಳಿಗೆ 5 ಎಕರೆ ಜಮೀನು ಇದ್ದು, ತೆಂಗು, ಅಡಿಕೆ ಗಿಡ ಬೆಳೆಸಿರುತ್ತಾರೆ ಎಂದರೆ ಸರಿ. ಆರೋಪಿಗಳು ಅನುಕೂಲಸ್ಥರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರ ಆರ್ಥಿಕ ಸ್ಥಿತಿ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಕವಿತಾ ತೀರಿಕೊಂಡ ನಂತರ ಆರೋಪಿಗಳಿಂದ ಹಣ ಮತ್ತು ಭಾಗ ಪಡೆಯುವ ಉದ್ದೇಶದಿಂದ ಟಿಪಿ ಮೆಂಬರ್ ಚಂದ್ರಪ್ಪ, ನಾನು ಮತ್ತು ಚಾಸಾ:1 ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್. ಘಟನೆಯಾದಾಗ ಚಂದ್ರಪ್ಪ

ತಾಲೂಕಾ ಪಂಚಾಯತ್ ಸದಸ್ಯನಾಗಿದ್ದು ನಾನು ಗ್ರಾ.ಪಂ. ಸದಸ್ಯನಾಗಿದ್ದೆ ಎಂದರೆ ಸರಿ. ದೂರು ನೀಡಲು ಹೋದಾಗ ಚಾಸಾ:1 ರವರ ಜೊತೆಗೆ ನಾನು ಮತ್ತು ಚಂದ್ರಪ್ಪ ಹೋಗಿದ್ದೆವು ಎಂದರೆ ಸರಿ. ದೂರನ್ನು ನಾನೇ ಹೇಳಿ ಬರೆಯಿಸಿದ್ದೆ ಎಂದರೆ ಸರಿಯಲ್ಲ. ದೂರನ್ನು ಚಾಸಾ:1 ರವರ ತಮ್ಮನ ಮಗ ಗೋವಿಂದಪ್ಪ ಹೇಳಿ ಬರೆಯಿಸಿರುತ್ತಾನೆ.

ಕವಿತಾ ಇವಳು ಮಕ್ಕಳಾಗಿಲ್ಲ ಎಂದು, ಅವಳಿಗೆ ಮೊಬೈಲ್ ಕೊಡುತ್ತಿಲ್ಲ ಎಂದು ಆರೋಪಿಗಳು ಕಿರುಕುಳ ಕೊಡುತ್ತಿದ್ದ ಬಗ್ಗೆ ಚಾಸಾ: 1 ರವರು ನನಗೆ ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.